



# ಆಹಾ..

# ಇದು ಕುಂಬಳಕಾಯಿ ಕಲೆ!

ಕಗ್ಗಲ್ಲು ಸಿಕ್ಕರೂ ಮೇಣದಂತೆ ಮಣಿಸಿ ಅಪೂರ್ವ ಕಲಾಕೃತಿ ಅರಳಿಸಬಲ್ಲ ಕಲಾವಿದನಿಗೆ ಮೃದುವಾದ ಬೃಹತ್ ಆಕಾರದ ಕುಂಬಳಕಾಯಿ ಸಿಕ್ಕರೆ ಜೀವಂತಿಕೆಯನ್ನು ಹೇಗೆ ಚೆಲ್ಲೆಂದು ಚಿಮ್ಮಿಸಬಹುದೋ ಎನ್ನುವುದಕ್ಕೆ ನಿದರ್ಶನ ಈ ಚಿತ್ರಗಳು. ಜಗತ್ತಿನ ಅತಿದೊಡ್ಡ ಕುಂಬಳಕಾಯಿಗೆ ಗೌರವ ಸಲ್ಲಿಸಲು ಇದಕ್ಕಿಂತ ಉತ್ತಮ ಆಯ್ಕೆಯುಂಟೇ?

ಇದರಲ್ಲಿ ಅನುಪಮ ಕಲೆ ಅರಳಿಸಿ ಆನಂದ ಪಡೆಯುವುದನ್ನು ಬಿಟು ಜಿಮ್ ಬ್ರಾಯ್ಸನ್ ಹಾಗೂ ಅವರ ಮಗಳು ಕಿಲ್ಸೆ ಅವರು ಕಂಡುಕೊಂಡಿದ್ದಾರೆ. ಹಿಂದೊಮ್ಮೆ 1818.5 ಪೌಂಡ್‌ನಷ್ಟು ಭಾರದ ಕುಂಬಳಕಾಯಿ ಬೆಳೆದು ಜಾಗತಿಕ ದಾಖಲೆ ನಿರ್ಮಾಣವಾದಾಗ ರೇ ವಿಲ್ಲಾಫೇನ್ ಎಂಬ ಕಲಾವಿದ ಸಹಜವಾಗಿ ಅದ್ಭುತ ಕಲೆ ಅರಳಿಸುವಲ್ಲಿ ಸಿದ್ಧ ಹಸ್ತನಾಗಿದ್ದ. 2000ನೇ ಇಸವಿಯಿಂದಲೇ ಈ ಕೆತ್ತನೆಯ ಕೆಲಸದಲ್ಲಿ ತೊಡಗಿಕೊಂಡು ವಾರ್ನರ್ಸ್ ಬ್ರದರ್ಸ್ ಕಂಪೆನಿಗೆ, ಡಿ.ಸಿ. ಕಾಮಿಕ್ಸ್, ಮಾರ್ವೆಲ್ ಹಾಗೂ ಮೆಕ್ ಫಾರಲೆನ್‌ಗೆ ಮಕ್ಕಳ ಆಟಿಕೆಗಳನ್ನು ಸಿದ್ಧಪಡಿಸಿ ಕೊಡುತ್ತಿರುವ ಈ ಚತುರ ಕಲಾವಿದ ಮರಳಿನಲ್ಲಿ ಆಕೃತಿ ಸೃಷ್ಟಿಸುವುದರಲ್ಲಿಯೂ ಎತ್ತಿದ ಕೈ.

ಜಗತ್ತಿನಲ್ಲಿಯೇ ದೊಡ್ಡದೆನಿಸಿದ ವಿಸ್ಮಯ ಮೂಡಿಸುವ ಕಲಾಕೃತಿ ಮೂಡಿಸಿದ್ದಾನೆ ಈತ. ಕುಂಬಳಕಾಯಿಯಲ್ಲಿ ಇದಕ್ಕೆ ಜೀವದುಂಬಲು 1693 ಪೌಂಡಿನ ಮತ್ತೊಂದು ಕುಂಬಳಕಾಯಿಯನ್ನೂ ಬಳಸಿಕೊಂಡಿದ್ದಾನೆ. ಸದ್ಯಕ್ಕೆ ಇದೇ ವಿಶ್ವದ ಅತಿದೊಡ್ಡ ಕುಂಬಳಕಾಯಿ ಕೆತ್ತನೆಯ ಕಲಾಕೃತಿಯೆನಿಸಿದೆ.

■ ಡಾ. ಅಮೀರುದ್ದೀನ್ ಖಾಜಿ

